**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ಸತ್ರ ಮೊಕದ್ದಮೆ ಸಂ.125/2023**

ಪ್ರಾ.ಸಾ. ಃ **33**

ದೋ.ಸಾ. ಃ **40**

ದಿ.**09.03.2026**

| | |
|---|---|
| ಹೆಸರು | ಃ ರುದ್ರಮೂರ್ತಿ |
| ತಂದೆಯ ಹೆಸರು | ಃ ಲೇಟ್ ಲಿಂಗಣ್ಣಯ್ಯ |
| ವಯಸ್ಸು | ಃ **62** ವರ್ಷ |
| ಉದ್ಯೋಗ | ಃ ನಿವೃತ್ತ ಪಿಎಸ್ಐ |
| ವಾಸಸ್ಥಳ | ಃ ತುಮಕೂರು |

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

1. ನಾನು ಜೂನ್ 2022 ರಿಂದ ಅಕ್ಟೋಬರ್ 2023 ರವರೆಗೆ ಹೆಬ್ಬೂರು ಪೋಲೀಸ್ ಠಾಣೆಯಲ್ಲಿ ಎಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿ.20.03.2023 ರಂದು ನಾನು ಠಾಣಾಧಿಕಾರಿಯಾಗಿದ್ದಾಗ ಹೆಚ್ ಸಿ 287 ನಂದೀಶ ರವರು ತುಮಕೂರು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದ ಶಿವಸ್ವಾಮಿ ಅಲಿಯಾಸ್ ಸ್ವಾಮಿ ತಂದೆ ಚಿಕ್ಕಣ್ಣನವರ ಹೇಳಿಕೆ ಮಾಡಿಕೊಂಡು ಬಂದು ನನ್ನ ಮುಂದೆ ಹಾಜರುಪಡಿಸಿದ್ದು, ಅದನ್ನು ಸ್ವೀಕರಿಸಿ, ಪರಿಶೀಲಿಸಿ ಮಧ್ಯಾಹ್ನ 12.15 ಗಂಟೆಗೆ ಠಾಣಾ ಮೊ.ನಂ. 50/2023 ರಲ್ಲಿ ಪ್ರಕರಣ ದಾಖಲು ಮಾಡಿಕೊಂಡು, ಪ್ರ ವ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಪ್ರತಿಯನ್ನು ನನ್ನ ಮೇಲಧಿಕಾರಿಗಳಿಗೆ ರವಾನಿಸಿರುತ್ತೇನೆ. ನಿಶಾನೆ ಪಿ6 ರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ6(ಡಿ) ಎಂದು ಗುರುತಿಸಲಾಯಿತು. ಪ್ರ ವ ವರದಿಯನ್ನು ನೋಡುತ್ತಿದ್ದು ಅದನ್ನು ನಿಶಾನೆ ಪಿ67 ಎಂದು, ಅದರಲ್ಲಿರುವ ನನ್ನ

ಸಹಿಯನ್ನು ನಿಶಾನೆ ಪಿ67(ಎ) ಎಂದು ಗುರುತಿಸಲಾಯಿತು.

3. ನಂತರ ಸಿಪಿಐ ಚನ್ನೇಗೌಡರವರ ಆದೇಶದ ಮೇರೆಗೆ ಅದೇ ದಿನ ಸ್ಥಳ ಪಂಚನಾಮೆ ಮಾಡಲು ಬನ್ನಿಮರದ ಕಟ್ಟೆ ಗ್ರಾಮದ ತಾಂಡವೇಶ್ವರ ವುಡ್ ವರ್ಕ್ ಅಂಗಡಿಯ ಮುಂಭಾಗಕ್ಕೆ ಹೋಗಿ ಸಾಕ್ಷಿದಾರರಾದ ರಂಗಶಾಮಯ್ಯ, ರಮೇಶ್ ಹಾಗೂ ಡಾ.ಮಂಜುನಾಥ್ ಕೆ.ಸಿ., ಎಫ್ ಎಸ್ ಎಲ್ ರವರ ಸಮಕ್ಷಮ ಗಂಗಲಕ್ಷ್ಮಿ ತೋರಿಸಿದ ಸ್ಥಳದಲ್ಲಿ ಮಧ್ಯಾಹ್ನ 1.15 ರಿಂದ 2.30 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ, ಆ ಸಮಯದಲ್ಲಿ ರಕ್ತಮಿಶ್ರಿತ ಮಣ್ಣು, ಸಾದಾ ಮಣ್ಣು, ಇನ್ನೊಂದು ರಕ್ತಮಿಶ್ರಿತ ಮಣ್ಣು, ರಕ್ತ ಸಂಗ್ರಹಿಸಿದ ಹತ್ತಿ, ಮರದ ತುಂಡು ಮತ್ತು ವುಲ್ಲನ್ ಬ್ಲಾಂಕೆಟ್ ಗಳನ್ನು ಅಮಾನತ್ತುಪಡಿಸಿಕೊಂಡು, ಪ್ರತ್ಯೇಕವಾಗಿ ಬಿಳಿ ಬಟ್ಟೆ ಚೀಲಗಳಲ್ಲಿ ಇಟ್ಟು, ಬಾಯನ್ನು ಕಟ್ಟಿ, ಕೆ ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಮಾಡಲಾಯಿತು. ಅವುಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮು ಮಾ 1, 5 ರಿಂದ 14 ಎಂದು ಗುರುತಿಸಲಾಗಿದೆ. ಆ ಸಮಯದಲ್ಲಿ ತೆಗೆದ ಫೋಟೋಗಳನ್ನು ನಿಶಾನೆ ಪಿ10 ರಿಂದ 13 ಎಂದು, ಸಿಡಿಯನ್ನು ನಿಶಾನೆ ಪಿ14 ಎಂದು ಗುರುತಿಸಲಾಗಿದೆ. ಪಂಚನಾಮೆಯಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ9(ಡಿ) ಎಂದು ಗುರುತಿಸಲಾಯಿತು. ಮುಂದಿನ ತನಿಖೆಯನ್ನು ಚಾ ಸಾ 41 ಚನ್ನೇಗೌಡ ಸಿಪಿಐ ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀ ಸವಾಲು ಶ್ರೀ.ಆರ್.ಬಾಲಕೃಷ್ಣ, ಮುಖ್ಯ ಕಾನೂನು ಅಭಿರಕ್ಷಕರಿಂದ ಆರೋಪಿತನ ಪರವಾಗಿ:**

4. ಹೇಳಿಕೆ ಪಡೆದುಕೊಳ್ಳಲು ನಂದೀಶ ರವರನ್ನು ನಾನೇ ನೇಮಿಸಿದ್ದೆನು. ಆಸ್ಪತ್ರೆಯಿಂದ ಮಾಹಿತಿ ಬಂದಿತ್ತು. ಆ ಮಾಹಿತಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನಿಶಾನೆ ಪಿ6 ರಲ್ಲಿ ನಂದೀಶನ ಸಹಿ ಇಲ್ಲ. ಕೇಸಿಗೆ ಅನುಕೂಲವಾಗುವಂತೆ ನಿಶಾನೆ ಪಿ6 ನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಮಧ್ಯಾಹ್ನ 12.45 ಗಂಟೆಗೆ ಪ್ರ ವ ವರದಿಯನ್ನು ಹೆಚ್ ಸಿ 241 ನೀಲಕಂಠೇಶ್ ರವರ ಮುಖಾಂತರ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ಹೆಬ್ಬೂರಿನಿಂದ ನ್ಯಾಯಾಲಯಕ್ಕೆ ಅರ್ಧ ಗಂಟೆಯಲ್ಲಿ ಬರಬಹುದು ಎಂದರೆ ಹೇಳಲಾಗುವುದಿಲ್ಲ.

ಮಧ್ಯಾಹ್ನ 12.45 ಗಂಟೆಗೆ ಪ್ರ ವ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿಪಿಐ ರವರು ನನ್ನನ್ನು ಘಟನಾ ಸ್ಥಳಕ್ಕೆ ಹೋಗಲು ನೇಮಕ ಮಾಡಿದ್ದರು. ಗಂಗಲಕ್ಷ್ಮಿಯವರು ಮರದ ತುಂಡನ್ನು ತೋರಿಸಿದರು. ಗಂಗಲಕ್ಷ್ಮಿಯ ಹೇಳಿಕೆಯನ್ನು ನಾನು ಮಾಡಿಕೊಂಡಿಲ್ಲ. ನಾನು ಪೆಟ್ಟಿಗೆ ಅಂಗಡಿಯ ಹಿಂಬದಿಗೆ ಹೋಗಿದ್ದೆನು, ಅಲ್ಲಿತ ನಿಖೆ ಮಾಡಿಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ, ಮು ಮಾ 1, 5 ರಿಂದ 14 ನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಡಾ.ಮಂಜುನಾಥ್ ರವರ ಸಹಿಯನ್ನು ಮಹಜರಿಗೆ ತೆಗೆದುಕೊಂಡಿಲ್ಲ. ಈ ಪ್ರಕರಣಕ್ಕೋಸ್ಕರ ಮಹಜರನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಮರದ ತುಂಡಿನ ವಿವರಣೆಯನ್ನು ಮಹಜರಿನಲ್ಲಿ ಬರೆದಿಲ್ಲ. ಡಾ.ಮಂಜುನಾಥ್ ರವರು ಬರೆದಿದ್ದಾರೆ.

ಮರು ವಿಚಾರಣೆ ಃ ಇಲ್ಲ

**(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು